| | | |
|---|---|---|
| ಓ ಎಸ್ | 79/2013 | ಪಿ.ಡಬ್ಲ್ಯೂ: 1 |

ಇಂದು ದಿಃ 12/1/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-

ನೀಲರಂಠದೇವರಿಗೆ ಎಷ್ಟು ಮಕ್ಕಳು ಎಂದು ಕೇಳಿದರೆ 1 ನೇ ಹೆಂಡತಿ ಮೂಲಕ 3 ಹೆಣ್ಣು ಹಾಗು 1 ಗಂಡು ಮಕ್ಕಳು ಹಾಗು 2 ನೇ ಹೆಂಡತಿ ಮೂಲಕ 2 ಹೆಣ್ಣುಮಕ್ಕಳು ಎಂದು ನುಡಿಯುತ್ತೇನೆ. ನೀಲಕಂಠದೇವರು ಹಾಗು ನಾಗೇಂದ್ರಮ್ಮ ದಂಪತಿಗಳಿಗೆ ಜನಿಸಿರುವ ಹೆಣ್ಣುಮಕ್ಕಳ ಹೆಸರು ಅಕ್ಕಮಹದೇವಮ್ಮ , ಇಂದ್ರಾಣಿ, ಮಹದೇವಸ್ವಾ ಮಿ , ರೇಣುಕ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ 2 ನೇ ಹೆಂಡತಿ ಮೂಲಕ ನಾಗಮ್ಮ ಹಾಗು ಮಂಜುಳ ಜನಿಸಿರುತ್ತಾರೆ. 2 ನೇಹೆಂಡತಿ ಎಂದು ಹೇಳಿರುವ ಕುರಿತು ಯಾವಾಗ ಹಾಗು ಎಲ್ಲಿ ಆಕೆಯನ್ನು ಮದುವೆಯಾಗಿದ್ದೆಂದು ಹೇಳಲು ನನಗೆ ಗೊತ್ತಿಲ್ಲ.

ನೀಲಕಂಠದೇವರು ರವರ ಸಹೋದರ ಸಹೋದರಿಯರ ಹೆಸರು ಪುಟ್ಟಮ್ಮ, ರತ್ನಮ್ಮ, ಜಯಮ್ಮ, ನಂಜುಡಶಿವಯೋಗಿಗಳು ಆಗಿರುತ್ತಾರೆ. ಒ ಎಸ್ 124/1988 ರಲ್ಲಿ ನೀಲಕಂಠದೇವರ ವಿರುದ್ದ ನೀಲಕಂಠದೇವರ ತಾಯಿ ಗೌರಮ್ಮ ಹಾಗು ಮೇಲೆ ಹೇಳಿದ ನಂಜುಂಡ ಶಿವಯೋಗಿಗಳು ನಂಜನಗೂಡಿನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಗೌರಮ್ಮ ರವರ ಗಂಡ ಅಂದರೆ ನೀಲಕಂಠದೇವರ ತಂದೆಯ ಹೆಸರು ಶಿವಪ್ಪದೇವರು. ಶಿವಪ್ಪದೇವರು ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿರುವ ಸ್ವತ್ತುಗಳು ಎಲ್ಲವೂ ಒ ಎಸ್ 124/1988 ರಲ್ಲಿ ಇದ್ದವು ಎಂದರೆ ನಿಜ. 1994 ರಲ್ಲಿ ಗೌರಮ್ಮ ರವರಿಗೆ ನೀಲಕಂಠ ದೇವರುರವರಿಗೆ ಹಾಗು ನಂಜುಂಡಶಿವಯೋಗಿಗಳಿಗೆ ತಲಾ 1/3 ಭಾಗ ಬರಬೇಕೆಂದು ನ್ಯಾಯಾಲಯ ಪ್ರಿಲಿಮಿನರಿ ಡಿಕ್ರಿ ಮಾಡಿದೆ ಎಂದರೆ ಗೊತ್ತಿಲ್ಲ. ಆ ದಾವೆಯಲ್ಲಿ ಸರ್ವೆ ನಂ.47 ರಲ್ಲಿ 6 ಎಕರೆ 36 ಗುಂಟೆ , ಸರ್ವೆ ನಂ.48 ರಲ್ಲಿ 5 ಎಕರೆ 8 ಗುಂಟೆ , ಸರ್ವೆ ನಂ. 137/1 ರಲ್ಲಿ

35 ಗುಂಟೆ , ಸರ್ವೆ ನಂ.141 ರಲ್ಲಿ 5 ಎಕರೆ 38 ಗುಂಟೆ , ಸರ್ವೆ ನಂ.14 ರಲ್ಲಿ 6 ಎಕರೆ 5 ಗುಂಟೆ , ಸರ್ವೆ ನಂ.15 ರಲ್ಲಿ 3 ಎಕರೆ 22 ವರೆ ಗುಂಟೆ , ಸರ್ವೆ ನಂ.23 ರಲ್ಲಿ 3 ಎಕರೆ 21 ಗುಂಟೆ , ಸರ್ವೆ ನಂ.24/1 ರಲ್ಲಿ 3 ಎಕರೆ 13 ಗುಂಟೆ , ಸರ್ವೆ ನಂ. 114 ರಲ್ಲಿ 2 ಎಕರೆ 16 ಗುಂಟೆ , ಸರ್ವೆ ನಂ.115 ರಲ್ಲಿ 6 ಎಕರೆ 14 ಗುಂಟೆ , ಸರ್ವೆ ನಂ.117 ರಲ್ಲಿ 4 ಎಕರೆ 9 ಗುಂಟೆ , ಸರ್ವೆ ನಂ.158 ರಲ್ಲಿ 6 ಎಕರೆ 3 ಗುಂಟೆ ಸ್ವತ್ತುಗಳಲ್ಲಿ ಸಮನಾಗಿ 1/3 ಭಾಗ ಆಗಬೇಕು ಎಂದು ಪ್ರಿಲಿಮಿನರಿ ಡಿಕ್ರಿ ಆಗಿದೆ ಎಂದರೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮಹದೇವಸ್ವಾಮಿ ಜಮೀನುಗಳನ್ನು ಮಾರಿಕೊಂಡು ತಿಂದಿದ್ದಾರೆ ಹಾಗು ಸರ್ವೆ ನಂ.47 ಮತ್ತು 48 ನ್ನು ನನ್ನ ತಂದೆಯು ನನ್ನ ತಾಯಿಯದ ಕೆಂಪದೇವಮ್ಮಳಿಗೆ ಬರೆದುಕೊಟ್ಟಿದ್ದರು ಈಗ ಅದನ್ನೂ ಬೇಕು ಎಂದು ಕೇಸುಹಾಕಿಕೊಂಡಿದ್ದಾರೆ. ನನ್ನ ತಾಯಿಯನ್ನು ನೀಲಕಂಠದೇವರು ಮದುವೆಯಾಗಿದ್ದಾರೆಂದು ನೋಡಿದ್ದವರು ನಮ್ಮ ಊರಿನಲ್ಲಿ ಇದ್ದಾರೆಯೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ಕೆಂಪದೇಮ್ಮ ರವರನ್ನು ನೀಲಕಂಠದೇವರು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಕೆಂಪದೇವಮ್ಮ ರವರ ಗಂಡ ಆಕಳ ಗ್ರಾಮದ ಶಂಭುಲಿಂಗಪ್ಪ ಎಂದರೆ ಸರಿಯಲ್ಲ. ಆಕಳ ಗ್ರಾಮದಲ್ಲಿ ಸುಮಾರು ಐದು ಆರು ವರ್ಷಗಳ ಕಾಲ ಕೆಂಪದೇವಮ್ಮ ಹಾಗು ಶಂಬುಲಿಂಗಪ್ಪ ರವರು ಸಂಸಾರ ಮಾಡಿದ್ದಾರೆ ಎಂದರೆ ಸರಿಯಲ್ಲ. ಕೇಂಪದೇವಮ್ಮರವರು ಅದೇಅವಧಿಯಲ್ಲಿ ಹಿರಿಮಗಳಿಗೆ ಜನ್ಮನೀಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಮಗುವಿನ ಅಂದರೆ ನನ್ನ ಬಸರಿಯಾಗಿದ್ದ ಸಮಯದಲ್ಲಿ ಕೆಂಪದೇವಮ್ಮರವರು ಶಂಭುಲಿಂಗಪ್ಪ ರವರನ್ನು ತೊರೆದು ಮಡುವಿನಹಳ್ಳಿ ಗ್ರಾಮಕ್ಕೆ ಬಂದು ನೆಲೆಸಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ತಾಯಿ ಶಂಭುಲಿಂಗಪ್ಪರವರನ್ನು ಮದುವೆಯಾಗಿಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಹೊಡೆದುಕೊಳ್ಳಲೆಂದು ಆರೀತಿ ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ.

1 ರಿಂದ 4 ನೇ ಪ್ರತಿವಾದಿಗಳ ಜೊತೆ ನಾನು ಅಥವಾ ನನ್ನ ತಾಯಿ ಅಥವಾ ನನ್ನ ಸಹೋದರಿ ವಾಸವಿದ್ದೆವು ಎಂದು ತೋರಿಸುವಂತಹ ದಾಖಲೆಗಳು ಇವೆಯೇ ಎಂದು

ಕೇಳಿದರೆ ನಾವು ನೀಲಕಂಠ ದೇವರ ಜೊತೆ ವಾಸವಿದ್ದದ್ದು ಹೊರತು 1 ರಿಂದ 4 ನೇ ಪ್ರತಿವಾದಿಯರ ಜೊತೆ ಅಲ್ಲ ಹಾಗು ನೀಲಕಂಠದೇವರು ನನ್ನ ತಾಯಿಯ ಜೊತೆಯೇ ವಾಸವಿದ್ದರು ಹಾಗು ಅವರು ತೀರಿಕೊಂಡಿದ್ದು ಕೂಡ ನಮ್ಮ ಮನೆಯಲ್ಲೆ ಹಾಗು ಅವರ ಅಂತಿಮ ಸಂಸ್ಕಾರ ಮಾಡಿದ್ದು ಕೂಡ ನಾವೆ ಎಂದು ನುಡಿಯುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂಜುಂಡಶಿವಯೋಗಿಗಳಿಗೆ ಮದುವೆಯಾಗಿರಲಿಲ್ಲ ಎಂದರೆ ನಿಜ. ಅವರು ಮಡುವಿನಹಳ್ಳಿ ಗ್ರಾಮದಲ್ಲಿ ತೀರಿಕೊಂಡಿದ್ದು ಎಂದರೆ ನಿಜ. ನನ್ನ ತಾಯಿ ಆಕೆಯ 16 ನೇ ವರ್ಷದ ವಯಸ್ಸಿ ನಲ್ಲಿ ನೀಲಕಂಠದೇವರನ್ನು ಮದುವೆಯಾಗಿದ್ದಳು. ಅವರಿಬ್ಬರೂ ಮದುವೆಯಾಗಿದ್ದರು ಎಂದು ತೋರಿಸುವ ದಾಖಲಾತಿಗಳು ಇವೆಯೇ ಎಂದು ಕೇಳಿದರೆ ಓಟರ್ಸ್ ಲಿಸ್ಟ್ ಇದೆ , ರೇಷನ್ ಕಾರ್ಡ್ ಇದೆ ಹಾಗು ಗ್ರಾಮದವರು ಕೂಡ ಹೇಳುತ್ತಾರೆ ಎಂದು ನುಡಿಯುತ್ತೇನೆ. ಅವೆಲ್ಲಾ ಈಗ 5 ವರ್ಷದಿಂದ ಈಚೆಗೆ ಮಾಡಿಕೊಂಡಿರುವ ದಾಖಲಾತಿಗಳು ಎಂದರೆ ಸರಿಯಲ್ಲ. ನೀಲಕಂಠದೇವರ ಆಸ್ತಿಗಳನ್ನು ನಮ್ಮದಾಗಿಸಿಕೊಳ್ಳಬೇಕೆಂದು ಆರೀತಿ ದಾಖಲೆಗಳನ್ನು ನಾವು ಸೃಷ್ಟಿಮಾಡಿಕೊಂಡಿರುವುದು ಎಂದರೆ ಸರಿಯಲ್ಲ. ನನ್ನ ತಾಯಿಯ ಮೇಲೆ 1 ಮತ್ತು 4 ನೇ ಪ್ರತಿವಾದಿ ಒ ಎಸ್ 58/2004 ರಂತೆ ಶಾಶ್ವತ ಪ್ರತಿಭಂದಕಾಜ್ಞೆಗಾಗಿ ಒಂದು ದಾವೆ ಸಲ್ಲಿಸಿದ್ದರು ಎಂದರೆ ಅದು ನಮ್ಮಂತೆಯೇ ತೀರ್ಮಾನವಾಗಿದೆ ಎಂದು ನುಡಿಯುತ್ತೇನೆ. 2004 ನೇ ಇಸವಿಯಿಂದಲೂ ಸದರಿ ದಾವೆಯ ಸಂಪೂರ್ಣ ಅರಿವು ನನಗೆ ಇದೆ. ಸದರಿ ದಾವೆಯಲ್ಲಿನ ಸರ್ವೆ ನಂ.47 ಹಾಗು 48 ನೀಲಕಂಠ ದೇವರಿಗೆ ಅವರ ತಾತನಿಂದ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ತಂದೆ ಅದನ್ನು ಸ್ವಂತ ಸಂಪಾದನೆ ಮಾಡಿದ್ದರು. ಸದರಿ ದಾವೆಯಲ್ಲಿ ನನ್ನ ತಾಯಿ ಲಿಖಿತ ತಕರಾರು ಸಲ್ಲಿಸುವಾಗ ಏನು ಹೇಳಿದ್ದಾರೆ ಎಂದು ನನಗೆ ಗೊತ್ತು.

ನೀಲಕಂಠದೇವರು ವ್ಯವಸಾಯಮಾಡುತ್ತಿದ್ದರು. ಅದನ್ನು ಹೊರತು ಅವರಿಗೆ ಬೇರೆ ಆದಾಯ ಇರಲಿಲ್ಲ ಎಂದರೆ ಅವರ ಸ್ವಂತ ಸಂಪಾದನೆಯಿಂದಲೇ ಅವರು ಜಮೀನು

ಖರೀದಿ ಮಾಡಿದ್ದು ಎಂದು ನುಡಿಯುತ್ತೇನೆ. ಸರ್ವೆ ನಂ.14, 15, 23, 24, 114, 115, 117, 158, 47, 48, 141, 137/1 ಈ ಭೂಮಿಗಳನ್ನು ನೀಲಕಂಠದೇವರು ಹಾಗು ಅವರ ತಾಯಿ ಮತ್ತು ತಮ್ಮ ಉಳುಮೆಮಾಡುತ್ತಿದ್ದದ್ದು ಎಂದರೆ ನಿಜ.

ಈ ದಾವೆಯಲ್ಲಿ ಯಾರನ್ನೆಲ್ಲಾ ಪಕ್ಷಗಾರರಾಗಿ ಸೇರಿಸಲಾಗಿದೆ ಎಂದರೆ ಜಮೀನು ಕೊಟ್ಟವರನ್ನು , ತೆಗೆದುಕೊಂಡವರನ್ನು ಎಲ್ಲರನ್ನೂ ಸೇರಿಸಲಾಗಿದೆ ಎಂದು ನುಡಿಯುತ್ತೇನೆ. ಆರೀತಿ ಮಾರಾಟ ನನ್ನ ತಂದೆ ಜೀವಂತ ಇದ್ದಾಗಲೇ ಆಗಿತ್ತು ಎಂದರೆ ಸರಿಯಲ್ಲ. ಮಲ್ಲಣ್ಣರವರಿಗೆ ನನ್ನ ತಂದೆ ಜೀವಂತ ಇದ್ದಾಗಲೇ ಮಾರಾಟ ಮಾಡಿದ್ದು ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ನೀಲಕಂಠದೇವರಿಗೆ ಅವರ ತಂದೆಯಿಂದ ಬಂದಿತ್ತು ಎಂದರೆ ಗೊತ್ತಿಲ್ಲ. ವಾದಿಯರಿಗೆ ಹಾಗು 1 ರಿಂದ 4 ನೇ ಪ್ರತಿವಾದಿಯರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾವುಗಳು ಪರಸ್ಪರ ಅಪರಿಚಿತರು ಎಂದರೆ ಸರಿಯಲ್ಲ.

ನನ್ನ ತಾಯಿ ಹಾಗು ನೀಲಕಂಠದೇವರು ಬೇಲುಕುಪ್ಪೆ ದೇವಸ್ಥಾನದಲ್ಲಿ ಮದುವೆಮಾಡಿಕೊಂಡಿದ್ದಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗು ನನ್ನ ತಂಗಿ ಶಂಬುಲಿಂಗಪ್ಪನ ಮಕ್ಕಳು ಎಂದರೆ ಸರಿಯಲ್ಲ. ನನ್ನ ಹಾಗು ನನ್ನ ತಂಗಿಯ ರಕ್ತದ ಮಾದರಿಯನ್ನು ಹಾಗು 4 ನೇ ಪ್ರತಿವಾದಿ ಮಹದೇವಸ್ವಾಮಿಯ ರಕ್ತದ ಮಾದರಿಯನ್ನು ಪಡೆದು ಡಿ ಎನ್ ಎ ಪರಿಕ್ಷೆಗಾಗಿ ಲ್ಯಾಬಿಗೆ ಕಳುಹಿಸಿಕೊಡುವ ಕುರಿತು ಹಾಗು ನಾವುಗಳು ಒಂದೇ ತಂದೆಯ ಮಕ್ಕಳೇ ಎಂಬ ಬಗ್ಗೆ ವರದಿ ತರಿಸುವ ಕುರಿತು ನನ್ನ ಆಕ್ಷೆಪ ಇದೆಯೇ ಎಂದು ಕೇಳಿದರೆ ಆರೀತಿ ಪರೀಕ್ಷೆ ಮಾಡಲು ನನ್ನ ತಂದೆ ಇಲ್ಲವಲ್ಲ ಎಂದು ನುಡಿಯುತ್ತೇನೆ. ನನ್ನ ತಾಯಿ ನೀಲಕಂಠದೇವರ ಕುಟುಂಬದವರಾಗಿದ್ದರೆ ಒ ಎಸ್ 124/1988 ರ ದಾವೆಯಲ್ಲಿ ಬಂದುಸೇರಿಕೊಳ್ಳುತ್ತಿದ್ದೆವು ಎಂದರೆ ಆದಾವೆ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತೇನೆ. ನೀಲಕಂಠದೇವರ ಕುಟುಂಬದವರು ನಾವು ಅಲ್ಲವಾದ್ದರಿಂದ ನಮಗೆ ಸದರಿಯವರ ಕುಟುಂಬದ ಜೊತೆ ಯಾವುದೇ ಸಂಬಂಧ ಇರಲಿಲ್ಲವಾದ್ದರಿಂದ ಸದರಿ ದಾವೆಯ ಬಗ್ಗೆ ಗೊತ್ತಾಗಲಿಲ್ಲ ಹಾಗು ಆ ಕಾರಣದಿಂದಲೇ ನಾವು ಸದರಿ ದಾವೆಯಲ್ಲಿ ಸೇರಿಕೊಂಡಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ರಕ್ತದ

ಮಾದರಿಜೊತೆ ನಮ್ಮ ರಕ್ತದ ಮಾದರಿಗಳನ್ನು ಪರಿಕ್ಷೆಗೆ ಕಳುಹಿಸುವ ಬಗ್ಗೆ ನಮ್ಮ ಆಕ್ಷೇಪ ಇದೆಯೇ ಎಂದು ಕೇಳಿದರೆ ನಾವು ಈಗಾಗಲೇ ಸಬಂಧಗಳನ್ನು ರುಜುವಾತು ಪಡಿಸಲು ಬೇಕಾಗಿರುವ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತೇನೆ. ದಾಖಲೆಗಳಬಗ್ಗೆ ಈ ಪ್ರಶ್ನೆ ಕೇಳಿಲ್ಲ ಹಾಗು ಕೇವಲ ಡಿ ಎನ್ ಎ ಪರೀಕ್ಷೆ ಕುರಿತು ನಿಮ್ಮ ಒಪ್ಪಿಗೆ ಇದೆಯೇ ಅಥವಾ ಇಲ್ಲವೇ ಎಂದು ಪುನಃ ಕೇಳಿದರೆ ಪರೀಕ್ಷೆ ಮಾಡಿಸಬಹುದು ಎಂದು ನುಡಿಯುತ್ತೇನೆ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.